ದಿನಾಂಕ: 05.01.2019 ರಂದು ಶ್ರೀಮತಿ.ಶಾಂತ ಬಾಬು ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಧಸ್ಯರು, ವಾರ್ಡ್ ನಂ-191 ಸಿಂಗಸಂದ್ರ ರವರ ಅಧ್ಯಕ್ಷತೆಯಲ್ಲಿ ಘನತ್ಯಾಜ್ಯ, ಬೀದಿದೀಪ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಾವೇರಿ ಕುಡಿಯುವ ನೀರು ಪೈಪ್ ಅಳವಡಿಕೆ ಮತ್ತು ಸಂಪರ್ಕ ಮತ್ತು ವಾರ್ಡ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಾರ್ಡ್ ಮಟ್ಟದ ಕಮಿಟಿ ಸಭೆಯ ನಡಾವಳಿಗಳು.

ಉಪಸ್ಥಿತರಿದ್ದವರು.

| ಕ್ರಮ ಸಂಖ್ಯೆ | ವಾರ್ಡ್ ಸಮಿತಿ ಸಧಸ್ಯರುಗಳ ಹೆಸರು | ಪದನಾಮ |
|---|---|---|
| 1 | ಶ್ರೀಮತಿ.ಶಾಂತ ಬಾಬು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಧಸ್ಯರು ಹಾಗೂ ವಾರ್ಡ್ ಮಟ್ಟದ ಕಮಿಟಿಯ ಅಧ್ಯಕ್ಷರು |
| 2 | ಶ್ರೀ.ನಾಗರಾಜು.ವಿ. | ಸಧಸ್ಯರು |
| 3 | ಶ್ರೀಮತಿ.ಗೀತಮ್ಮ | ಸಧಸ್ಯರು |
| 4 | ಶ್ರೀಮತಿ.ಕೆಂಪಮ್ಮ, | ಸಧಸ್ಯರು |
| 5 | ಶ್ರೀಮತಿ.ಶಾಂತಮ್ಮ | ಸಧಸ್ಯರು |
| 6 | ಶ್ರೀಮತಿ.ಗೀತಮ್ಮ | ಸಧಸ್ಯರು |
| 7 | ಶ್ರೀಮತಿ.ಶುಭ, | ಸಧಸ್ಯರು |
| 8 | ಶ್ರೀ.ಶ್ರೀನಿವಾಸ ರೆಡ್ಡಿ, | ಸಧಸ್ಯರು |
| 9 | ಶ್ರೀ.ವಿಜಯ್ ಕುಮಾರ್, | ಸಧಸ್ಯರು |
| 10 | ಶ್ರೀ.ಗಣೇಶ್ ರೆಡ್ಡಿ, | ಸಧಸ್ಯರು |
| 11 | ಶ್ರೀ.ಶಂಕರ್, | ಸಧಸ್ಯರು |
| 12 | ಶ್ರೀ.ಕೆ.ಬಿ.ಮಂಜುನಾಥ್, | ಸಧಸ್ಯರು |
| 13 | ಸಹಾಯಕ ಅಭಿಯಂತರರು ವಾರ್ಡ್-191 | ಕಾರ್ಯದರ್ಶಿ ಮತ್ತು ಸಂಚಾಲಕರು |
| 14 | ಶ್ರೀ.ಶ್ರೀಧರ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| | | |

ಮೇಲ್ಕಂಡ ಸಭೆಗೆ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳನ್ನು ವಾರ್ಡ್‌ನ ಸಹಾಯಕ ಅಭಿಯಂತರರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ವಾರ್ಡ್ ಕಮಿಟಿ ಸಭೆಯಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಯಿತು.

**ವಿಷಯ: (1) ವಾರ್ಡ್‌ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಕಾವೇರಿ ಕುಡಿಯುವ ನೀರಿನ ಪೈಪ್‌ಗಳನ್ನು ಅಳವಡಿಸುತ್ತಿದ್ದು ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ ಹಾಗೂ ಮನೆಗಳಿಗೆ ಸಂಪರ್ಕ ಪಡೆಯಲು ಅನುಸರಿಸಬೇಕಾದ ನಿಯಮಗಳೇನು ಹಾಗೂ ಇದನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಲು ಪ್ರಕಟಣೆ ಹೊರಡಿಸಬೇಕೆಂದು ಚರ್ಚಿಸಲಾಯಿತು. ಇದಕ್ಕೆ ಸಂಬಂದಿಸಿದಂತೆ ಸಂಬಂದಿಸಿದ ಸಹಾಯಕ ಅಭಿಯಂತರರು ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಹಾಗೂ ಮನೆಗಳಿಗೆ ಸಂಪರ್ಕ ಪಡೆಯಲು ನಿಯಮಗಳನ್ನು ಸಾರ್ವಜನಿಕರಿಗೆ ತಿಳಿಯುವಂತೆ ಪ್ರಕಟಣೆಗಳನ್ನು ಹೊರಡಿಸಲಾಗುವುದೆಂದು ಸಭೆಗೆ ತಿಳಿಸಿದರು.**

ಇದಕ್ಕೆ ಸಂಬಂದಿಸಿದಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಅಭಿಯಂತರರು ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಹಾಗೂ ಮನೆಗಳಿಗೆ ಸಂಪರ್ಕ ಪಡೆಯಲು ನಿಯಮಗಳನ್ನು ಸಾರ್ವಜನಿಕರಿಗೆ ತಿಳಿಯುವಂತೆ ಪ್ರಕಟಣೆಗಳನ್ನು ಹೊರಡಿಸಲಾಗುವುದೆಂದು ಸಭೆಗೆ ತಿಳಿಸಿದರು.

**ವಿಷಯ: (2) ವಾರ್ಡ್‌ನಲ್ಲಿ ಕೆಲವು ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು ಗುಂಡಿಗಳನ್ನು ಮುಚ್ಚುವಾಗ ಮಣ್ಣಿನ ಅಗೆತ ಮತ್ತು ಸ್ವಚ್ಛ ಮಾಡಿರುವ ಡೆಬ್ರಿಸ್ ಪಾದಚಾರಿ ಮಾರ್ಗದಲ್ಲಿದ್ದು ಅದನ್ನು ಸ್ವಚ್ಛಗೊಳಿಸಲು ಸೂಚಿಸಲಾಯಿತು.**

ಇದಕ್ಕೆ ಸಂಬಂದಿಸಿದಂತೆ ವಾರ್ಡ್‌ನ ಸಹಾಯಕ ಅಭಿಯಂತರರು ಪಾದಚಾರಿ ಮಾರ್ಗದಲ್ಲಿರುವ ಡೆಬ್ರೀಸ್ ಮತ್ತು ಮಣ್ಣನ್ನು ತೆಗೆಯಲು ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು

**ವಿಷಯ: (3) ವಾರ್ಡ್‌ನಲ್ಲಿ ಬಹುತೇಕ ಎಲ್ಲಾ ರಸ್ತೆಗಳಲ್ಲಿ ಅಗತ್ಯವಾದ ಬೀದಿ ದೀಪಗಳಿಲ್ಲದೆ ಸಾರ್ವಜನಿಕರು ತುಂಬಾ ತೊಂದರೆಯನ್ನು ಅನುಭವಿಸುತ್ತಿರುತ್ತಾರೆ. ಇದನ್ನು ತಕ್ಷಣವೇ ಸರಿಪಡಿಸಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು.**

Scanned by CamScanner

ಇದಕ್ಕೆ ಸಂಬಂಧಿಸಿದಂತೆ ವಿದ್ಯುತ್ ವಿಭಾಗದ ಇಂಜಿನಿಯರ್ ರವರಾದ ಶ್ರೀ.ರಮೇಶ್ ರವರು 15 ದಿನಗಳೊಳಗಾಗಿ ಚಾಲ್ತಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸಿ ಅಗತ್ಯವಿರುವ ಕಡೆ ಹೊಸದಾಗಿ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

**ವಿಷಯ: (4) ವಾರ್ಡ್‌ನಲ್ಲಿ ವಿದ್ಯುತ್ ಭೂಗತ (Underground) ಕೇಬಲ್‌ಗಳನ್ನು ಅಳವಡಿಸಲು ಮತ್ತು ಕೂಡ್ಲು ಗ್ರಾಮದಲ್ಲಿ ಹೊಸ ವಿದ್ಯುತ್ ಕಂಭಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಚರ್ಚಿಸಲಾಯಿತು.**

ಇದಕ್ಕೆ ಸಂಬಂಧಿಸಿದಂತೆ ವಿದ್ಯುತ್ ವಿಭಾಗದ ಇಂಜಿನಿಯರ್ ರವರಾದ ಶ್ರೀ.ರಮೇಶ್ ರವರು ಸಂಬಂಧಿಸಿದ ಅಧಿಕಾರಿಗಳ ಜೊತೆ ಚರ್ಚಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**ವಿಷಯ: (5) ವಾರ್ಡ್‌ನ ಸಿಲ್ವರ್ ಕೌಂಟಿ ರಸ್ತೆಯಲ್ಲಿ ಕಸ ಮತ್ತು ಡೆಬ್ರೀಸ್‌ನ್ನು ತಂದು ಹಾಕುತ್ತಿದ್ದು ಇದನ್ನು ತಡೆಯಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ಅಗತ್ಯವೆನಿಸಿದರೆ ಪೋಲೀಸ್ ಇಲಾಖೆಗೆ ದೂರು ನೀಡಿ ಈ ರೀತಿ ಅನಧೀಕೃತವಾಗಿ ಕಸ ಹಾಕುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಸಭೆಯಲ್ಲಿ ಚರ್ಚಿಸಲಾಯಿತು.**

ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ರಾತ್ರಿ ವೇಳೆ ಪ್ರಹರಿ ಮೂಲಕ ಗಸ್ತು ತಿರುಗಿ ಅನಧೀಕೃತವಾಗಿ ಡೆಬ್ರೀಸ್ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

**ವಿಷಯ: (6) ವಾರ್ಡ್‌ನಲ್ಲಿ ನಿರ್ಮಾಣ ಮಾಡಿರುವ ಸಮುಧಾಯ ಭವನದ ಉದ್ಘಾಟನಾ ದಿನಾಂಕವನ್ನು ನಿಗಧಿಪಡಿಸಲು ಸಭೆಯಲ್ಲಿ ಚರ್ಚಿಸಲಾಯಿತು.**

ಇದಕ್ಕೆ ಸಂಬಂಧಿಸಿದಂತೆ ವಾರ್ಡ್‌ನ ಸಹಾಯಕ ಅಭಿಯಂತರರು ಮಾನ್ಯ ವಿಧಾನ ಸಭಾ ಸಧಸ್ಯರುಗಳ ಜೊತೆ ಚರ್ಚಿಸಿ ದಿನಾಂಕವನ್ನು ನಿಗಧಿಪಡಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**ವಿಷಯ: (7) ವಾರ್ಡ್‌ನಲ್ಲಿ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಧಾನ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲು ಚರ್ಚಿಸಲಾಯಿತು.**

**ವಿಷಯ: (8) ವಾರ್ಡ್‌ನಲ್ಲಿ 23 ಪಾರ್ಕ್‌ಗಳಿದ್ದು ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಲು ಸಭೆಯಲ್ಲಿ ಚರ್ಚಿಸಲಾಯಿತು.**

ಇದಕ್ಕೆ ಸಂಬಂಧಿಸಿದಂತೆ ವಾರ್ಡ್‌ನಲ್ಲಿ 23 ಪಾರ್ಕ್‌ಗಳಿದ್ದು 16 ಪಾರ್ಕ್‌ಗಳನ್ನು ಬಿ.ಡಿ.ಎ. ವತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಶಕ್ಕೆ ಪಡೆಯಲಾಗಿದ್ದು ಸದರಿ ಸಾಲಿನಲ್ಲಿ 3 ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು ಉಳಿದ ಪಾರ್ಕ್‌ಗಳಿಗೆ ಅನುಧಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**ವಿಷಯ: (9) ವಾರ್ಡ್‌ನಲ್ಲಿ ಸಹಾಯಕ ಅಭಿಯಂತರರ ಹುದ್ದೆ, ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆ ಖಾಲಿ ಇದ್ದು ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿದ್ದು ಕಸ ವಿಂಗಡಣೆ ಸಮರ್ಪಕವಾಗಿ ನಿರ್ವಹಣೆಯಾಗುತ್ತಿಲ್ಲ ಆದುದರಿಂದ ಸಹಾಯಕ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರರನ್ನು ನಿಯೋಜಿಸಲು ಸಭೆಯಲ್ಲಿ ಚರ್ಚಿಸಲಾಯಿತು.**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ-191, ಸಿಂಗಸಂದ್ರ.

V. SHANTHABABU
BBMP Member
Singasandra Ward No.191
ಅಧ್ಯಕ್ಷರು
ವಾರ್ಡ್ ಕಮಿಟಿ
ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಧಸ್ಯರು.
ವಾರ್ಡ್ ನಂ-191, ಸಿಂಗಸಂದ್ರ.

ಪ್ರತಿಯನ್ನು:-

1) ಜಂಟಿ ಆಯುಕ್ತರು(ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ.
2) ಉಪ ಆಯುಕ್ತರು(ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ ಮಂಡಿಸಿದೆ.
3) ಕಂದಾಯ ಅಧಿಕಾರಿ(ಅಂಜನಾಪುರ) ವಲಯ ರವರ ಅವಗಾಹನೆಗೆ ಮಂಡಿಸಿದೆ.
4) ವಾರ್ಡ್ ಸಮಿತಿ ಸದಸ್ಯರು ರವರಿಗೆ ಕಳುಹಿಸಲಾಗಿದೆ.
5) ಕಛೇರಿ ಕಡತಕ್ಕೆ.

Scanned by CamScanner